ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ : ಮಾನ್ಯ ಮುಖ್ಯಮಂತ್ರಿಗಳೇ, ಉತ್ತರ ಕೊಡುವುದಾಗಿ ಹೇಳಿದ್ದಾರೆ. ಅವರ ಸಹಿ ಅಬ್ಬಾಗಿದೆ.

ಅಧ್ಯಕ್ಷರು : ಆ ಖಾತೆಯ ಸಚಿವರು ಬರಬೇಕಲ್ಲಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಟೇಬಲ್ ಮೇಲೆ ಉತ್ತರ ಇದ್ದಾಗ ಇದನ್ನು ಮುಂದಕ್ಕೆ ಹಾಕಲು ಬರುವುದಿಲ್ಲ. ಯಾರಾದರೂ ಎದ್ದು ಹೇಳಬೇಕಾಗುತ್ತದೆ. ನಮಗೆ ರಿಪ್ಲೈ ಬಂದಿದೆಯಲ್ಲಾ?

ಅಧ್ಯಕ್ಷರು : ಸಂಬಂಧಪಟ್ಟ ಸಚಿವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ರಿಪ್ಲೈ ಬಂದಿದೆ. ಆದ್ದರಿಂದ ಯಾರಾದರೂ, ಒಬ್ಬರು ಹೇಳಬೇಕಾಗುತ್ತದೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಇದನ್ನು ಕೊನೆಯಲ್ಲಿ ತೆಗೆದುಕೊಳ್ಳೋಣ.

ಅಧ್ಯಕ್ಷರು : ಅನಂತರ ಸಂಬಂಧಪಟ್ಟ ಸಚಿವರನ್ನು ಕರೆಸಿ ಅವರಿಂದಲೇ ಉತ್ತರ ಕೊಡಿಸೋಣ. ಸದಸ್ಯರು ಸಪ್ಲಿಮೆಂಟರೀಸ್ ಕೇಳಬೇಕಾಗುತ್ತದೆ. ಸಮರ್ಪಕವಾಗಿ ಉತ್ತರ ಕೊಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಸಚಿವರನ್ನು ಅವರನ್ನು ಕರೆಸಿ ಉತ್ತರ ಕೊಡಿಸೋಣ.

ಶ್ರೀ ಎನ್. ಧರ್ಮಸಿಂಗ್ : ಕೊನೆಯಲ್ಲಿ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಟ್ಟಿನಲ್ಲಿ ಇದನ್ನು ಡೆಫರ್ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಉತ್ತರ ಬಂದಿರುವುದರಿಂದ ಮುಂದೆ ಹಾಕಲು ಹೋಗಬೇಡಿ, ಅದು ಸರಿಯಲ್ಲ.

ಭಾಲ್ಕಿ ಪಟ್ಟಣದ ಕುಡಿಯುವ ನೀರಿನ ಯೋಜನೆ

18 (415) : ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಈಗ ಯಾವ ಹಂತದಲ್ಲಿದೆ;

2) ಈ ಕಾಮಗಾರಿಗೆ ಇಲ್ಲಿಯವರೆಗೆ ಮಾಡಿದ ವೆಚ್ಚ ಎಷ್ಟು ಮತ್ತು ಬಾಕಿ ಉಳಿದ ಮೊತ್ತ ಎಷ್ಟು;

3) ಈ ಯೋಜನೆಯು ಯಾವಾಗ ಪೂರ್ಣಗೊಳಿಸಬೇಕಾಗಿತ್ತು;

4) ವಿಳಂಬವಾಗಿದ್ದರೆ ಕಾರಣವೇನು;

5) ತ್ವರಿತಗತಿಯಲ್ಲಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದೆ;

6) ಈ ಯೋಜನೆ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು)

1) ಭಾಲ್ಕಿ ಪಟ್ಟಣಕ್ಕೆ ಕಾರಂಜಾ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ರೂ. 603.20 ಲಕ್ಷ ಅಂದಾಜಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯಾಗಿರುತ್ತದೆ. ಸದರಿ ಯೋಜನೆಯಡಿ ಮೂಲ ಸ್ಥಾವರ ನಿರ್ಮಾಣ, ಕಚ್ಚಾ/ಶುದ್ಧ ನೀರು ಏರು ಕೊಳವೆ ಮಾರ್ಗ

ಅಳವಡಿಸುವುದು, ಪಂಪ್ ಹೌಸ್ ನಿರ್ಮಿಸುವುದು ಮತ್ತು ಎರಡು ಸಂಖ್ಯೆ 10.0 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವ ಕಾಮಗಾರಿಗಳನ್ನು ಪ್ಯಾಕೇಜ್ ಟೆಂಡರ್ ಆಧಾರದ ಮೇಲೆ ಮೆ: ಜಿ.ಎಂ.ಪಿ.ಆರ್. ಇಂಜಿನಿಯರ್ಸ್ ಲಿಮಿಟೆಡ್, ಹೈದರಾಬಾದ್ ಇವರಿಗೆ ವಹಿಸಿಕೊಡಲಾಗಿದೆ. ಚಾಕ್‌ವೆಲ್ ಕಮ್ ಪಂಪ್ ಹೌಸ್ ಕಾಮಗಾರಿಯ ಫೌಂಡೇಷನ್ ಪೂರ್ಣಗೊಳಿಸಿ ಸ್ಟೀನಿಂಗ್ 9.30 ಮೀ. ಎತ್ತರವರೆಗೆ ಪೂರ್ಣಗೊಂಡಿರುತ್ತದೆ. ಎರಡು ಸಂಖ್ಯೆ 10.0 ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ಕಾಮಗಾರಿಗಳ ಸೈಜಿಂಗ್ ಕೆಲಸಗಳು ಪೂರ್ಣಗೊಂಡಿರುತ್ತದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಕಾರಂಜಾ ನದಿಗೆ ಅಡ್ಡಲಾಗಿ ನಿರ್ಮಿಸಬೇಕಾದ ಬ್ಯಾರೇಜ್ ಕಾಮಗಾರಿಯ ವಿನ್ಯಾಸ ಮತ್ತು ಅಂದಾಜು ತಾಂತ್ರಿಕ ಪರಿಶೀಲನೆಯಲ್ಲಿದೆ. ಹಾಗೂ 120 ಅಶ್ವಶಕ್ತಿಯ ಡೀಪ್‌ವೆಲ್ ಟರ್ಬೈನ್ ಪಂಪ್‌ಸೆಟ್ ಮತ್ತು 75 ಅಶ್ವಶಕ್ತಿಯ ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

2) ಈ ಯೋಜನೆಯ ಕಾಮಗಾರಿಗಳಿಗೆ ಇಲ್ಲಿಯವರೆಗೆ ರೂ. 35.68 ಲಕ್ಷಗಳು ವೆಚ್ಚವಾಗಿರುತ್ತದೆ ಹಾಗೂ ರೂ. 567.34 ಲಕ್ಷಗಳ ಕಾಮಗರಿಗಳು ಕೈಗೊಳ್ಳಬೇಕಾಗಿದೆ.

3) ಮೇ, 2005 ರೊಳಗೆ ಪೂರ್ಣಗೊಳಿಸಬೇಕಾಗಿತ್ತು.

4) ಯೋಜನೆಯಲ್ಲಿನ ಎಂ.ಎಸ್. ಕೊಳವೆಗಳ ಮತ್ತು ರಿ ಇನ್‌ಫೋರ್ಸ್‌ಮೆಂಟ್ ಸ್ಟೀಲ್‌ಗಳ ದರಗಳು ಮಾರುಕಟ್ಟೆಯಲ್ಲಿ ತೀವ್ರವಾಗಿ ಹೆಚ್ಚಾಗಿರುವುದರಿಂದ ಗುತ್ತಿಗೆದಾರರು ಹೆಚ್ಚುವರಿ ದರ ನೀಡಲು ಕೋರಿ ಸದರಿ ಕಾಮಗಾರಿಗಳನ್ನು ಸ್ಥಗಿತಗೊಳಿಸಿರುತ್ತಾರೆ. ಸದರಿ ಗುತ್ತಿಗೆದಾರರು ಎಂ.ಎಸ್. ಕೊಳವೆಗಳ ಮತ್ತು ರಿ ಇನ್‌ಫೋರ್ಸ್‌ಮೆಂಟ್ ಸ್ಟೀಲ್‌ಗಳಿಗೆ ಕೇಳಿರುವ ಹೆಚ್ಚುವರಿ ದರಗಳನ್ನು ಗುತ್ತಿಗೆ ಷರತ್ತಿನ ಪ್ರಕಾರ ಕೊಡಲು ಸಾಧ್ಯವಿರುವುದಿಲ್ಲ. ಆದುದರಿಂದ ಸದರಿ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಪ್ರಾರಂಭಿಸಲು ದಿನಾಂಕ: 13.1.2005 ರಲ್ಲಿ ಅಂತಿಮ ನೋಟೀಸನ್ನು ನೀಡಿ ನೋಟೀಸ್ ತಲುಪಿದ 10 ದಿನಗಳೊಳಗೆ ಕಾಮಗಾರಿಯನ್ನು ಪ್ರಾರಂಭಿಸಲು ತಿಳಿಸಲಾಗಿದೆ. ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದಿದ್ದಲ್ಲಿ ನಿಯಮಾನುಸಾರ ಕ್ರಮ ತೆಗೆದುಕೊಂಡು ಗುತ್ತಿಗೆಯನ್ನು ರದ್ದುಗೊಳಿಸಿ ಬೇರೆ ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

5) ಸದರಿ ಯೋಜನೆಯನ್ನು ತ್ವರಿತಗತಿಯಲ್ಲಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

6) ಯೋಜನೆಯನ್ನು ಡಿಸೆಂಬರ್ 2005 ರೊಳಗೆ ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಭಾಲ್ಕಿ ಪಟ್ಟಣದ ನೀರಿನ ಸಮಸ್ಯೆ ಹದಿನೈದು ಇಪ್ಪತ್ತು ವರ್ಷಗಳಿಂದ ನಡೆಯುತ್ತಿದೆ, ಬರಗಾಲ ಬಂದಾಗಲೆಲ್ಲಾ ಟ್ಯಾಂಕರ್‌ನಿಂದ ನೀರನ್ನು ಒದಗಿಸುವ ವ್ಯವಸ್ಥೆ ನಡೆಯುತ್ತಿದೆ, ಹೋದ ಸಲ ಅಂದಾಜು 6 ಕೋಟಿ ರೂ. ಕೆಲಸವನ್ನು ಕೈಗೊಳ್ಳಲಾಗಿದೆ. ಇದರಲ್ಲಿ ಇದುವರೆಗೆ ಕೇವಲ 35 ಲಕ್ಷ ರೂ. ಮಾತ್ರ ಕೆಲಸ ಮಾಡಿದ್ದಾರೆ, ಟೆಂಡರ್ ಅವಧಿ ಮುಗಿದುಹೋಗಿದೆ. ಈ ಕಾಮಗಾರಿಗೆ ಇನ್ನೂ 567 ಲಕ್ಷ ರೂಪಾಯಿಗೆ ಟೆಂಡರ್ ಕರೆಯಬೇಕೆಂದು ಇದರಲ್ಲಿ ತೋರಿಸಿದ್ದಾರೆ. ಈಗಾಗಲೇ ಎರಡೂವರೆ ಕೋಟಿ ರೂ.ಗೆ ಒಂದು ಟೆಂಡರ್ ಕರೆದಿದ್ದಾರೆ. ಅನಂತರ ಬ್ಯಾರೇಜ್ ಮತ್ತು ಫಿಲ್ಟರ್‌ಬೆಡ್‌ಗೆ ಸೆಕೆಂಡ್ ಟೆಂಡರ್ ಕರೆಯಬೇಕಾಗಿದೆ. ಮೊದಲ

ಟೆಂಡರ್ ಏನು ಕರೆದಿದ್ದರು ಅದರಲ್ಲಿ ಕೇವಲ 35 ಲಕ್ಷ ರೂ. ಮಾತ್ರ ಖರ್ಚು ಮಾಡಿದ್ದಾರೆ. 2 ಕೋಟಿ ರೂ ಗೂ ಮೇಲ್ಪಟ್ಟು ಅದರಲ್ಲಿ ಖರ್ಚಾಗಬೇಕು. ಈ ಕಾಮಗಾರಿಯನ್ನು ಯಾವಾಗ ಪೂರ್ಣ ಮಾಡುತ್ತೀರಿ ಎಂದು ಕೇಳಿದ್ದಕ್ಕೆ 2005ರ ಮೇ ಒಳಗಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನು ಸೆಕೆಂಡ್ ಟೆಂಡರ್‌ರನ್ನೇ ಕರೆದಿಲ್ಲ. ಮೊದಲನೆ ಟೆಂಡರ್‌ನಲ್ಲಿ 35 ಲಕ್ಷ ರೂ. ಮಾತ್ರ ಖರ್ಚು ಮಾಡಿದ್ದಾರೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಈ ಯೋಜನೆ ಪ್ರಾರಂಭವಾಗಿದೆ. ಆದರೆ ಮಧ್ಯದಲ್ಲಿ ಗುತ್ತಿಗೆದಾರರು ಬಿಟ್ಟು ಹೋಗಿದ್ದಾರೆ. ಆದ್ದರಿಂದ ಈಗ contract tender rescind ಮಾಡಿದ್ದೇವೆ. ಇದುವರೆಗೆ 35 ಲಕ್ಷದ 68 ಸಾವಿರ ರೂ. ಖರ್ಚು ಮಾಡಿದ್ದೇವೆ. ಮುಂದೆ ಅದನ್ನು rescind ಮಾಡಿ ಮೇ ಒಳಗೆ ಬರತಕ್ಕ ಹಣವನ್ನು ಖರ್ಚು ಮಾಡುತ್ತೇವೆ. ಕೆಲಸ ಮಾಡುತ್ತಿದ್ದೇವೆ. ಪಟ್ಟಣ ಪ್ರದೇಶದಲ್ಲಿರತಕ್ಕ ನೀರಿನ ತೊಂದರೆ ಏನಿದೆ, ಮೊನ್ನೆ ಕೇಂದ್ರದ ಸಚಿವರಾದಂಥ ಮಾನ್ಯ ಗುಲಾಮ್‌ನಬಿ ಆಜಾದ್ ರವರ ಜೊತೆ ಮಾತನಾಡಿದೆ. ಭಾಲ್ಕಿಗೆ ಸಂಬಂಧಪಟ್ಟಿದ್ದು ಅಲ್ಲ, ಇಡೀ ರಾಜ್ಯದಲ್ಲಿರುವ ಪಟ್ಟಣ ಪ್ರದೇಶದಲ್ಲಿ ಏನು ಇದೇ ರೀತಿ ಎಸ್ಕಲೇಷನ್ ಕಾಸ್ಟ್ ಆಗುತ್ತಿದೆ, ಮತ್ತು ಪ್ರೊಜೆಕ್ಟೆಡ್ ಪಾಪ್ಯುಲೇಷನ್ ಸಹ ತೆಗೆದುಕೊಂಡಿದ್ದೇವೆ. ಪ್ರಥಮವಾಗಿ ಪ್ರಾರಂಭವಾದಮೇಲೆ ಎಷ್ಟು ಜನಸಂಖ್ಯೆ ಇತ್ತು, ಹೆಚ್ಚಿನ ಜನಸಂಖ್ಯೆ ಕೂಡ ಭಾಲ್ಕಿ ಟೌನ್‌ನಲ್ಲಿ ಆಗುತ್ತಿದೆ. ಇವೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು rescind ಮಾಡಿದಮೇಲೆ ಮತ್ತೊಂದು ಟೆಂಡರ್ ಕಾಲ್‌ಘಾರ್ ಮಾಡುತ್ತೇವೆ, ಮೇ ಒಳಗಾಗಿ ಆ ಕೆಲಸ ಪೂರ್ಣ ಮಾಡಬೇಕು ಮತ್ತು ನೀರನ್ನು ಕೊಡಬೇಕು ಎಂದು ಸರ್ಕಾರದ ಕಾರ್ಯಕ್ರಮವಿದೆ. ಅದೆಲ್ಲವನ್ನೂ ತಿಳಿದುಕೊಂಡೆ ಅಧಿಕಾರಿಗಳ ಜೊತೆ ಮಾತನಾಡಿ ಉತ್ತರವನ್ನು ಸದನದಲ್ಲಿ ಕೊಡುತ್ತಿದ್ದೇನೆ.

ಶ್ರೀ ಪ್ರಕಾಶ್ ಖಂಡ್ರೆ : ಇದರಲ್ಲಿ ಟೆಂಡರ್ rescind ಮಾಡಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟ ಅಧಿಕಾರಿಗಳು ರಿಪೋರ್ಟ್ ಮಾಡಿದ್ದಾರೆ. ಆದರೆ ಇವತ್ತಿಗೂ ಕೆಲಸ ನಡೆಯುತ್ತಿದೆ. ಬೇಕಾದರೆ ನಾಳೆಯೇ ಕೆಲಸ ನಡೆಯುತ್ತಿರುವ ಬಗ್ಗೆ ಫೋಟೊವನ್ನು ಸಹ ತರುತ್ತೇನೆ. ಈ ರೀತಿ ಸುಳ್ಳು ಮಾಹಿತಿ ಸದನಕ್ಕೆ ಕೊಡುವುದು ಸರಿಯಲ್ಲ. ನಿನ್ನೆ ಸಹ ಒಳಸಂಗ್ರಾಮದಲ್ಲಿ ಪ್ರಧಾನ ಮಂತ್ರಿಗಳ ವಿದ್ಯುತ್ತೀಕರಣ ಯೋಜನೆಯಲ್ಲಿ ಸಂಪರ್ಕ ಕೊಟ್ಟಿದ್ದೇವೆಂದು ಹೇಳಿದ್ದರು. ಆದರೆ ಅಲ್ಲಿ ಇನ್ನೂ ಟ್ರಾನ್ಸ್‌ಫಾರ್ಮರ್‌ರನ್ನೇ ಕೂರಿಸಿಲ್ಲ. ಈ ರೀತಿ ಸದನಕ್ಕೆ ಸುಳ್ಳು ಮಾಹಿತಿ ಯಾಕೆ ಬರುತ್ತಿದೆ? ಅದರಲ್ಲೂ ಮುಖ್ಯಮಂತ್ರಿಯವರಿಗೆ ಈ ರೀತಿ ಸುಳ್ಳು ಮಾಹಿತಿ ಕೊಟ್ಟು ಕೆಲಸವನ್ನು rescinding ಮಾಡಿದ್ದೇವೆಂದು ಹೇಳುತ್ತಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎರಡರದ್ದೂ ಓವರ್ ಹೆಡ್ ಟ್ಯಾಂಕ್‌ನ ಕೆಲಸ ಚಾಲುವಿನಲ್ಲಿದೆ.

ಶ್ರೀ ಧರ್ಮಸಿಂಗ್ : ಪೈಪ್ ಲೈನ್ ಹಾಕತಕ್ಕ ಕೆಲಸ ನಡೆದಿದೆ. ಮೇಜರ್ ವರ್ಕ್ಸ್ ಬಗ್ಗೆ ತೊಂದರೆ ಇದೆ. ಗುತ್ತಿಗೆದಾರರು ಆ ಕೆಲಸವನ್ನು ಮಾಡಲು ಆಗುತ್ತಿಲ್ಲ. ಯಾವ ಆಧಾರದ ಮೇಲೆ ಅದನ್ನು ಎಷ್ಟು ದರಕ್ಕೆ ತೆಗೆದುಕೊಂಡೆನೋ ಅದರಲ್ಲಿ ಮಾಡಲು ಆಗುತ್ತಿಲ್ಲವೆಂದು ಹೋಗಿಬಿಟ್ಟಿದ್ದಾನೆ. ಆದ್ದರಿಂದ ಅದನ್ನು rescind ಮಾಡಿದ್ದೇವೆ, ಮುಂದಿನ ಕೆಲಸಕ್ಕೆ ಟೆಂಡರ್ ಮಾಡಿ ಮೇ ಒಳಗೆ ಕೆಲಸ ಪೂರ್ಣ ಮಾಡುತ್ತೇವೆ. ತಮಗೂ ಇದು ಚೆನ್ನಾಗಿ ಗೊತ್ತಿದೆ, ತಾವು ಶಾಸಕರಿದ್ದೀರಿ, ಮೇಲಿಂದ ಮೇಲೆ ಹೇಳಿ, ಇಲ್ಲಿ ಪ್ರಶ್ನೆ ಕೇಳುವುದನ್ನು ಕೇಳಿದ್ದೀರಿ, ಮತ್ತೆ ಏನಾದರೂ ತೊಂದರೆಯಾದರೆ

ಸಮಕ್ಷಮ ಭೇಟಿಯಾದಾಗ ಅಧಿಕಾರಿಗಳಿಗೆ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನ ಎಂ.ಡಿ. ಯವರಿಗೆ ನಿರ್ದೇಶನ ಕೊಡುತ್ತೇನೆ, ಮೇ ಒಳಗಾಗಿ ಕೆಲಸ ಮುಗಿಸಲು ಆದೇಶ ಕೊಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಡಿ.ಆರ್. ಪಾಟೀಲರ ಪ್ರಶ್ನೆ.

ಶ್ರೀ ಪ್ರಕಾಶ್ ಖಂಡ್ರೆ : ಸಾರ್, ಈ ಕಾಮಗಾರಿಯ ಬಗ್ಗೆ ಮಾನ್ಯ ಶ್ರೀನಿವಾಸರೆಡ್ಡಿಯವರೂ ಸಹಿತ ಬಹಳಷ್ಟು ಪ್ರಯತ್ನ ಮಾಡಿದ್ದಾರೆ.

ಅಧ್ಯಕ್ಷರು : ಖಂಡ್ರೆಯವರೇ, ಎಷ್ಟು ಸಲ ಪ್ರಶ್ನೆ ಕೇಳುತ್ತೀರಿ? ಒಂದು ಪ್ರಶ್ನೆಗೆ 15 ನಿಮಿಷ ತೆಗೆದುಕೊಂಡರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಉತ್ತರ ಕೊಟ್ಟ ಮೇಲೂ ಮತ್ತೆ ಏನು ಕೇಳುತ್ತೀರಿ?

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಸಮಸ್ಯೆ ಇದೆ, ಆದುದರಿಂದ ಅದರ ಬಗ್ಗೆ ನಾನು ಇಲ್ಲಿ ಕೇಳುತ್ತಿದ್ದೇನೆ. ಇದರಲ್ಲಿ distribution line ಮಾಡಿಲ್ಲ. ಇದನ್ನು ಕಾರ್ಯಗತಗೊಳಿಸಿದರೆ, ಇದರಿಂದ ನೀರು ಸಿಗುವಂತಹ ವ್ಯವಸ್ಥೆ ಇಲ್ಲ. Over head tankಗೆ ನೀರು ಬರುತ್ತದೆ. ಆದರೆ over head tankನಿಂದ distribution line ಆಗಬೇಕಾಗಿದೆ. ಬೀದರ್ ಪ್ಯಾಕೇಜ್‌ನಲ್ಲಿ distribution line ಹಾಕುವುದನ್ನು include ಮಾಡಲಾಗುವುದೆಂದು ಹೇಳಲಾಗಿತ್ತು. ದಯವಿಟ್ಟು ತಾವು ಆ distribution line ಅನ್ನು ಮಾಡಿಸಿ ಕೊಟ್ಟರೆ ನಮಗೆ ಮೇ ತಿಂಗಳಲ್ಲಾದರೂ ನೀರು ಸಿಗಬಹುದಾಗಿದೆ. ಬೇಗ ಅದನ್ನು ಮಾಡಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಸ್. ಧರ್ಮಸಿಂಗ್ : ಅವರು ಏನು ಕೇಳಿದ್ದಾರೋ ಅದನ್ನು ಮಾಡಿಸಿಕೊಡಲಿಕ್ಕೆ ನಾನು ಆದೇಶ ಕೊಡುತ್ತೇನೆ.

ಉತ್ತರ ಕರ್ನಾಟಕದ ಪಟ್ಟಣಗಳ ಅಭಿವೃದ್ಧಿ ಯೋಜನೆ

19 (676) : ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಪಟ್ಟಣಗಳ ಅಭಿವೃದ್ಧಿಗಾಗಿ ತಯಾರಿಸಿದ ಯೋಜನೆಯ ಅನುಷ್ಠಾನ ಈಗ ಯಾವ ಹಂತದಲ್ಲಿದೆ;

ಆ) ಈ ಯೋಜನೆಯಲ್ಲಿ ಅಳವಡಿಸಲ್ಪಡುವ ನಗರಗಳು ಯಾವುವು;

ಇ) ಯೋಜನೆಗಳ ಅನುಷ್ಠಾನಕ್ಕೆ ಹಣಕಾಸಿನ ಹೊಂದಾಣಿಕೆ ಮಾಡಲಾಗಿದೆಯೇ;

ಈ) ಒಟ್ಟು ಎಲ್ಲಾ ಪಟ್ಟಣಗಳ ಯೋಜನೆ ವೆಚ್ಚ ಎಷ್ಟು;

ಉ) ಈ ಯೋಜನೆಯನ್ನು ಎಷ್ಟು ಕಾಲಾವಕಾಶದಲ್ಲಿ ಪೂರ್ಣಗೊಳಿಸಲಾಗುವುದು;

ಊ) ಯೋಜನೆ ಪೂರ್ಣಗೊಂಡಾಗ ಇದರ ಪ್ರಯೋಜನ ಪಡೆಯುವ ನಗರಗಳ ನಾಗರೀಕರಿಗೆ ಸಿಗುವ ಸೌಲಭ್ಯಗಳು ಬೆಂಗಳೂರಿಗೆ ಹೋಲಿಸಿದಾಗ ಯಾವ ಪ್ರಮಾಣದಲ್ಲಿರುವುವು;

ಋ) ಬೆಂಗಳೂರು ನಾಗರೀಕರಿಗೂ ಇತರೆ ನಗರಗಳಲ್ಲಿ ವಾಸವಾಗಿರುವ ನಾಗರಿಕರಿಗೂ ಮೂಲಭೂತ ಸೌಲಭ್ಯ ಒದಗಿಸುವಲ್ಲಿ ತಾರತಮ್ಯವಿಟ್ಟಿರುವುದು ಏಕೆ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಯೋಜನಾ ವರದಿಯ ತಯಾರಿಕೆ ಪ್ರಗತಿಯಲ್ಲಿದೆ ಅಂತಿಮ ವರದಿಯ ಕರಡು ಸಿದ್ಧವಾಗಿದ್ದು, ಅಂತಿಮ ವರದಿಯು ಮಾರ್ಚ್ 2005 ರೊಳಗಾಗಿ ಸಿದ್ಧವಾಗಲಿದೆ.